ಬಗರ್ ಹುಕುಂ: ಸೇಂದಿವನ ಮಂಜೂರಾತಿಗೆ ಕಾನೂನು ಅಡ್ಡಿ : ಕೃಷ್ಣ ಭೈರೇಗೌಡ

● ಪ್ರಜಾವಾಹಿನಿ–ಬೆಂಗಳೂರು

"ಬಗರ್ ಹುಕುಂ ಯೋಜನೆಯಡಿ ಅರ್ಹ ರೈತರಿಗೆ ಜಮೀನು ಮಂಜೂರು ಮಾಡುವುದು ಸರ್ಕಾರದ ಗುರಿ. ಆದರೆ, ಸೇಂದಿವನ (ಈಚಲುವನ) ಪ್ರದೇಶಗಳನ್ನು ಮಂಜೂರು ಮಾಡುವಲ್ಲಿ ಕಾನೂನು ಮತ್ತು ಹಳೆಯ ನಿಯಮಗಳು ಅಡ್ಡಿಯಾಗಿವೆ. ಕಾನೂನು ಚೌಕಟ್ಟು ಮೀರಿ ಜಮೀನು ನೀಡಲು ಸಾಧ್ಯವಿಲ್ಲ," ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದರು.

ಸೋಮವಾರ ಪ್ರಶ್ನೋತ್ತರ ಕಲಾಪದಲ್ಲಿ ಮಾಜಿ ಸಚಿವ ಟಿ.ಬಿ. ಜಯಚಂದ್ರ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಈಚಲುವನ ಪ್ರದೇಶಗಳನ್ನು ರೈತರಿಗೆ ಮಂಜೂರು ಮಾಡುವಲ್ಲಿ ಎದುರಾಗಿರುವ ತಾಂತ್ರಿಕ ಮತ್ತು **ಕಾನೂನು ಸಮಸ್ಯೆಗಳನ್ನು ವಿವರಿಸಿದರು.**

ಮಂಜೂರಾತಿಗೆ ತೊಡಕಾಗಿರುವ 5 ಪ್ರಮುಖ ನಿಯಮಗಳು

ಸೇಂದಿವನ ಜಮೀನನ್ನು ಅಬಕಾರಿ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗಾಯಿಸುವಾಗ 2003ರಲ್ಲಿ ರೂಪಿಸಲಾದ ಐದು ಕಟ್ಟುನಿಟ್ಟಿನ ನಿಯಮಗಳು ಈಗ ಮಂಜೂರಾತಿಗೆ ಹಿನ್ನಡೆಯಾಗಿವೆ

ಅರಣ್ಯ ಇಲಾಖೆ: 150 ಎಕರೆಗಿಂತ ಹೆಚ್ಚು ಜಮೀನಿದ್ದರೆ ಅದನ್ನು ಅರಣ್ಯ ಇಲಾಖೆಗೆ ನೀಡಬೇಕು.

ಸ್ಮಶಾನ ಮೀಸಲು: ಪ್ರತಿ ಗ್ರಾಮದಲ್ಲಿ ಕನಿಷ್ಠ 10 ಎಕರೆ ಜಾಗವನ್ನು ಸ್ಮಶಾನಕ್ಕೆ ಕಾಯ್ದಿರಿಸಬೇಕು.

ಸಾರ್ವಜನಿಕ ಉದ್ದೇಶ: ಆಶ್ರಯ ಯೋಜನೆ, ಮೊರಾರ್ಜಿ ಶಾಲೆ, ಹಾಸ್ಟೆಲ್, ಆರೋಗ್ಯ ಕೇಂದ್ರ ಹಾಗೂ ಬಸ್ ನಿಲ್ದಾಣಗಳಿಗಾಗಿ 10 ರಿಂದ 50 ಎಕರೆ ಮೀಸಲಿಡಬೇಕು.

ಸಂತ್ರಸ್ತರ ಕೋಟಾ: ಕೋಮುಗಲಭೆ ಹಾಗೂ ದೌರ್ಜನ್ಯಕ್ಕೊಳಗಾದ ಪರಿಶಿಷ್ಟ ಜಾತಿ/ಪಂಗಡದ ಕುಟುಂಬಗಳಿಗೆ ತಲಾ 3 **ಎಕರೆ ಮೀಸಲಿಡಬೇಕು.**

ಸಾಗುವಳಿ ಮಿತಿ: 1990ಕ್ಕಂತ ಮೊದಲಿನಿಂದ ಸಾಗುವಳಿ ಮಾಡುತ್ತಿರುವ ಭೂರಹಿತರಿಗೆ ಗರಿಷ್ಠ 5 ಎಕರೆ ಮಿತಿಯೊಳಗೆ ಮಾತ್ರ ಸಕ್ರಮಕ್ಕೆ ಅವಕಾಶವಿದೆ.

"ಹಲವು ಜಮೀನುಗಳು ದಾಖಲೆಗಳಲ್ಲಿ ಅರಣ್ಯ ಇಲಾಖೆ ಎಂದು ನಮೂದಾಗಿವೆ. **ಅರಣ್ಯ ಭೂಮಿ ರಕ್ಷಣೆಗೆ ಸುಪ್ರೀಂ ಕೋರ್ಟ್** ಕಟ್ಟುನಿಟ್ಟಿನ ಆದೇಶ ನೀಡಿದೆ. ಆದರೂ ರೈತರಿಗೆ **ನೆರವಾಗಲು ವಲಯ ಆಯುಕ್ತರ ನೇತೃತ್ವದಲ್ಲಿ** ಸಮಿತಿ ರಚಿಸಿ ನಿಯಮ ಸರಳೀಕರಣಕ್ಕೆ ಪ್ರಯತ್ನಿಸಲಾಗುತ್ತಿದೆ," ಎಂದು ಸಚಿವರು ತಿಳಿಸಿದರು.

ಮಾಜಿ ಸೈನಿಕರಿಗೆ ಗುಡ್ ನ್ಯೂಸ್: ವರ್ಷಾಂತ್ಯಕ್ಕೆ ನಿವೇಶನ

ಹರಿಹರ ಶಾಸಕ ಬಿ.ಪಿ. ಹರೀಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದ ಮಾಜಿ ಸೈನಿಕರಿಗೆ ವರ್ಷಾಂತ್ಯದೊಳಗೆ ನಿವೇಶನ ಮಂಜೂರು ಮಾಡುವ ಭರವಸೆ ನೀಡಿದರು.

ಡಿಜಿಟಲೀಕರಣ: ರಾಜ್ಯಾದ್ಯಂತ ಮಾಜಿ ಸೈನಿಕರ ಅರ್ಜಿಗಳನ್ನು ಆನ್‌ಲೈನ್ ಮೂಲಕ **ಡಿಜಿಟಲೀಕರಣ ಮಾಡಲಾಗಿದ್ದು, ಮಾಹಿತಿ ಈಗ ಬೆರಳ ತುದಿಯಲ್ಲಿದೆ.**

ದಾವಣಗೆರೆ ಪ್ರಗತಿ: ದಾವಣಗೆರೆ ಜಿಲ್ಲೆಯಲ್ಲಿ 338 ಅರ್ಜಿಗಳಿದ್ದು, ಈಗಾಗಲೇ 14 ಎಕರೆ ಜಾಗ ಗುರುತಿಸಲಾಗಿದೆ. ಇಲ್ಲಿ ಸುಮಾರು 350 ನಿವೇಶನಗಳನ್ನು ನಿರ್ಮಿಸಿ ಹಂಚಲಾಗುವುದು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕ ವಿಧಾನ ಮಂಡಲದಿಂದ ಆಯೋಜಿಸಿದ್ದ "ಅಯವ್ಯಯ, ರಾಜಸ್ವಗಳ ಸಂಗ್ರಹಣೆ, ಅನುದಾನಗಳ ವರ್ಗೀಕರಣ, ಹಾಗೂ ಅಯವ್ಯಯ ಅನುದಾನಗಳ ಬಳಕೆ ಮತ್ತು ನಿರ್ವಹಣೆ ಕುರಿತು ಶಾಸಕರುಗಳಿಗೆ ಕಾರ್ಯಾಗಾರದಲ್ಲಿ ಮಾತನಾಡಿದರು. ವಿಧಾನಸಭಾಧ್ಯಕ್ಷರಾದ ಯು.ಟಿ.ಖಾದರ್, ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಜಿ.ಪರಮೇಶ್ವರ್, ಹೆಚ್.ಕೆ.ಪಾಟೀಲ್, ಬೋಸರಾಜು ಅವರು ಉಪಸ್ಥಿತರಿದ್ದರು. ಕಾರ್ಯಾಗಾರದಲ್ಲಿ ಆಡಳಿತ ಪಕ್ಷದ ಶಾಸಕರುಗಳು ಮತ್ತು ವಿಧಾನ ಪರಿಷತ್ ಸದಸ್ಯರುಗಳು ಭಾಗವಹಿಸಿದ್ದರು.

ಸಾಧನೆಯೆ ನಮ್ಮ ಮುಖ್ಯ ಗುರಿಯಾಗಿರಬೇಕು : ಪದ್ಮಶ್ರೀ ಜೋಗತಿ ಮಂಜಮ್ಮ

● ಪ್ರಜಾವಾಹಿನಿ–ಆನೇಕಲ್

ಜನ ಹೇಗಿದ್ದರೂ ಆಡಿಕೊಳ್ಳೋದು ಬಿಡುವುದಿಲ್ಲ. ಹಾಗಿದ್ದರೂ, ಹೀಗಿದ್ದರೂ ಹೇಗಿದ್ದರೂ ಬಿಡುವುದಿಲ್ಲ, ಗಂಡಾಗಿ ಹುಟ್ಟಿ ಹೆಣ್ಣಾಗಿ ಪರಿವರ್ತನೆಯಾದಾಗ **ಅನುಭವಿಸಿದ ಕಷ್ಟ ಅಷ್ಟಿಷ್ಟಲ್ಲ, ಎರೆಡು ದಾರಿ** ಆತ್ಮಹತ್ಯೆಗೆ ಪ್ರಯತ್ನಿಸಿದೆ, ಆದರೆ ಮನದಲ್ಲಿ ಮೂಡಿದ್ದ ಛಲ ನಂಬಿ ಹಳ್ಳಿ ಗುಡಿಸಿಲಿನಿಂದ **ದೆಹಲಿವರೆಗೆ ಜಾನಪದ ಕಲೆ ನನ್ನನ್ನು ಗುರ್ತಿಸಿ** ಕರೆದುಕೊಂಡು ಹೋಗಿ ಸನ್ಮಾನಿಸಿತು. ಆದ್ದರಿಂದಲೇ ಈಗ ಇಂತಹ ವೇದಿಕೆಗಳಿಗೆ ಕರೆಸುತ್ತಿದ್ದಾರೆ. ಯಾರೇ ಆಗಲಿ ಸಾಧಕರಿಗೆ ಪ್ರೋತ್ಸಾಹಿಸಬೇಕು, ಕಾಲೆಳೆಯಬಾರದು, ಹೇಗಿದ್ದರೂ ಆಡಿಕೊಳ್ಳುವುದರಿಂದ ಸರ್ವಜ್ಞ ಹೇಳಿದ ರೀತಿ ನಾವ್ಬಟ್ಟು ಸೀರೆ ಗಟ್ಟಿಯಿದ್ದರೆ ಸೂಳೆಗೇರಿಯಲ್ಲೂ ಮನೆ ಮಾಡಬಹುದು ಎನ್ನುವ ದಿಟ್ಟ ನೇರವಂತಿಕೆ ನಮ್ಮಲ್ಲಿದ್ದು ಸಾಧನೆಯೇ ನಮ್ಮ ಮುಖ್ಯ ಗುರಿಯಾಗಿರಬೇಕೆಂದು ಕರೆ ನೀಡಿದರು.

ಅವರು ಭಾನುವಾರ ಆನೇಕಲ್ ಅಶ್ವತ್ಥ್ ನಾರಾಯಣ ರಂಗಮಂಟಪದಲ್ಲಿ ಆಯೋಜಿಸಿದ್ದ ಅಂತರಾರಾಷ್ಟ್ರೀಯ ಮಹಿಳಾ **ದಿನಾಚರಣೆಯಂದು ಭಾರ್ಗವಿ ವಿರಚಿತ ಮೂರು ಪುಸ್ತಕಗಳು ಹಾಗು ಭಾರ್ಗವಿ ಸೇವಾ** ಟ್ರಸ್ಟ್ ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಭಾರ್ಗವಿ ಈ ದಿನಮಾನದಲ್ಲಿ ಗಂಡನ ಮನೆಗೆ ಬಂದು ಮೂರು ಪುಸ್ತಕಗಳನ್ನು ಬರೆದು ಪ್ರಕಟಿಸುವುದಲ್ಲದೆ ಸಮಾಜದಲ್ಲಿ ಸಾಹಸಪ್ರಾಯವಾದ ಬದುಕು ಕಟ್ಟಿಕೊಂಡ ಮಹಿಳಾ ಸಾಧಕಿಯರನ್ನ ಒಂದು ವೇದಿಕೆಗೆ ಕರೆಸಿ ಸನ್ಮಾನಿಸಿ ಜೀವನೋತ್ಸಾಹ ಮೂಡಿಸಲು ಪ್ರಯತ್ನಿಸಿದ **ರೀತಿ ಶ್ಲಾಘನೆಗೆ** ಒಳಗಾಗಿದೆ ಇಂತಹ ಮನಸ್ಸುಗಳನ್ನು ಸಮಾಜ ಹೆಚ್ಚು ಹೆಚ್ಚು ಪ್ರೋತ್ಸಾಹಿಸುವ ಅಗತ್ಯವಿದೆ ಎಂದು **ನುಡಿದರು. ಹೆಣ್ಣು ಹೆರಿಗೆ ನೋವನ್ನು** ಅನುಭವಿಸಿ ಮಗುವಿಗೆ ಜನ್ಮ ನೀಡಿದರೆ ಸಾಕು ಪ್ರತಿ ತಾಯಿಯೂ ಸಾಧಕಿಯೇ, ನನ್ನನ್ನ ಆಡಿಕೊಂಡವರನ್ನ ಮೀರಿ ಬೆಳೆದಿದ್ದರಿಂದ **1 ವಿಶ್ವವಿದ್ಯಾಲಯಗಳಲ್ಲಿ ನನ್ನ ಪುಸ್ತಕಗಳು** ಪಠ್ಯವಾಗಿವೆ. ಅಲ್ಲದೆ ತೃತೀಯ ಲಿಂಗಿಗಳು ಇತ್ತೀಚೆಗೆ ಸಾಧನೆ ಮಾಡುತ್ತಿದ್ದಾರೆ, ಯಾರ ಹೊಟ್ಟೆಯಲ್ಲಿ ನನ್ನಂತಹ ಮಕ್ಕಳು ಹುಟ್ಟಿದರೆ ನಿರ್ಲಕ್ಷಿಸಬೇಡಿ ಅವರಿಗೆ ವಿದ್ಯೆ ಕೊಡಿ ಹಾಗೆ **ಕೊಟ್ಟ ಪೋಷಕರು ಹೆಮ್ಮೆ ಪಡುವಂತೆ** ಅವರು ಬದುಕಿ ತೋರಿಸಬಹುದು ಎಂದರು. ಇಂದು ತೃತೀಯ ಲಿಂಗಿಗಳಾಗಲಿ **ಕಾವಿಧರಿಸಿದವರಾಗಲಿ ಯಾರೇ ಶಾಪ** ಹಾಕಿದರೂ ಅದು ನೆರವೇರುವುದಿಲ್ಲ ಅದನ್ನ ಮೀರಿ ಬದುಕಿ ಎನ್ನುವ ಮಾತುಗಳನ್ನು ಆಡಿದರು.

ಆಂಗ್ಲ ಮತ್ತು ಕನ್ನಡದಲ್ಲಿ ಮನಸಾಲಜಿ ಆಫ್ ಮಾನಿನಿ ಮತ್ತು ಕುಸುಮ ಕೌಸ್ತುಭ ಎಂಬ ಪುಸ್ತಗಳನ್ನು ಲೋಕಾರ್ಪಣೆಗೊಳಿಸಿದ **ಭಾರ್ಗವಿ ಮಾತನಾಡಿ ಸಮಾಜದಲ್ಲಿ** ಎಲ್ಲ ಸ್ತರದ ಸಾಧಕರನ್ನು ಗುರ್ತಿಸುವುದು ಸಹಜ ಆದರೆ ಮಹಿಳಾ ದಿನಾಚರಣೆ ದಿನ ಅಂಗವೈಕಲ್ಯ ಅಥವಾ ಇನ್ನಿತರೆ ಸಮಾಜದಲ್ಲಿ ತಾತ್ಸಾರಕ್ಕೊಳಗಾಗಿ ಅದನ್ನು ಮೆಟ್ಟಿ ನಿಂತು ಸಾಧನೆ ಮಾಡುವ ಮಹಿಳೆಯರನ್ನು ಗುರ್ತಿಸುವುದು ಇಂದಿನ ಅತ್ಯಾವಶ್ಯಕ ಕೆಲಸ ಅಂತ ಅನ್ನಿಸಿದ್ದರಿಂದ ಇಂತಹ ಕೆಲಸಕ್ಕೆ ಕೈ ಹಾಕಿದ್ದು ಇದಕ್ಕಾಗಿ ತಾಯಿ, ಗಂಡ ಪ್ರೋತ್ಸಾಹವೇ ಕಾರಣ ಎಂದು ತಿಳಿಸಿದರು.

ರಾಜ್ಯದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವಿಶಿಷ್ಟ ಚೇತನ ಮಹಿಳಾ ಸಾಧಕಿಯರನ್ನ ಗುರ್ತಿಸಿ ಸನ್ಮಾನಿಸಿದರು.

ವೇದಿಕೆಯಲ್ಲಿ ಆನೇಕಲ್ ಹಿರಿಯ ಸಾಹಿತಿ ಜಗನ್ನಾಥ್ ಬಹುಳೆ, ಬಿಜೆಪಿ ಮುಖಂಡ **ಟಿವಿ ಬಾಬು, ಸಮಾಜ ಸೇವಕ ನರೇಂದ್ರ, ಆನೇಕಲ್ ಕಸಾಪ ಅಧ್ಯಕ್ಷ, ಆದೂರು ಪ್ರಕಾಶ್, ಚಿನ್ನಯ ಸೇವಾಟ್ರಸ್ಟ್ ಸಂಸ್ಥಾಪಕ ಚಿಕ್ಕಹಾಗಡೆ ಡಾ ವೈ ಚಿನ್ನಪ್ಪ, ಮಾಜಿ ಪುರಸಭಾ ಸದಸ್ಯ** ನರಸಿಂಹಾರೆಡ್ಡಿ ವೇದಿಕೆಯಲ್ಲಿ ಮಾತನಾಡಿದರು. **ಚಂದ್ರಶೇಖರ್ ಪಿ ರಾಯರು ಕಾರ್ಯಕ್ರಮ** ಸ್ವಾಗತಕೋರಿ ವಂದಿಸಿದರು.

ಶೀಘ್ರದಲ್ಲೇ 15 ಸಾವಿರ ಶಿಕ್ಷಕರ ನೇಮಕಾತಿ ಪ್ರಕ್ರಿಯೆ: ಮಧು ಬಂಗಾರಪ್ಪ

● ಪ್ರಜಾವಾಹಿನಿ–ಬೆಂಗಳೂರು

"ರಾಜ್ಯದ ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಖಾಲಿಯಿರುವ ಸುಮಾರು 15,000 ಶಿಕ್ಷಕರ ಹುದ್ದೆಗಳಿಗೆ ಶೀಘ್ರದಲ್ಲೇ ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗುವುದು," ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಸದನಕ್ಕೆ ತಿಳಿಸಿದರು.

ಸೋಮವಾರ ವಿಧಾನಪರಿಷತ್‌ನಲ್ಲಿ ಸದಸ್ಯ ಎಚ್. **ಎಸ್. ಗೋಪಿನಾಥ್ ಅವರ ಪ್ರಶ್ನೆಗೆ ಉತ್ತರಿಸಿದ** ಸಚಿವರು, ಶಿಕ್ಷಕರ ಕೊರತೆ ನೀಗಿಸಲು ಸರ್ಕಾರ ಬದ್ಧವಾಗಿದೆ ಎಂದು ಭರವಸೆ ನೀಡಿದರು.

ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರ ನೇಮಕ

ಖಾಯಂ ನೇಮಕಾತಿ ಪ್ರಕ್ರಿಯೆ ನಡೆಯುವವರೆಗೆ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯಾಗದಂತೆ ಅತಿಥಿ ಶಿಕ್ಷಕರನ್ನು ಬಳಸಿಕೊಳ್ಳಲಾಗುತ್ತಿದೆ. "ಪ್ರಸಕ್ತ **ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಪ್ರಾಥಮಿಕ** ಶಾಲೆಗಳಲ್ಲಿ 34,027 ಹಾಗೂ ಪ್ರೌಢ ಶಾಲೆಗಳಲ್ಲಿ 9,499 ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲಾಗುತ್ತಿದೆ," ಎಂದು ಸಚಿವರು ಮಾಹಿತಿ ನೀಡಿದರು.

ಬೆಂಗಳೂರು ನಗರದಲ್ಲಿ ಮೂಲಸೌಕರ್ಯ ಕೊರತೆಯಿಂದ ಶಾಲೆಗಳು ಮುಚ್ಚುತ್ತಿವೆ ಎಂಬ ಆರೋಪವನ್ನು ನಿರಾಕರಿಸಿದ ಅವರು, "ನಗರದಲ್ಲಿ 1,462 ಸರ್ಕಾರಿ ಶಾಲೆಗಳಿದ್ದು, 2.24 ಲಕ್ಷ ವಿದ್ಯಾರ್ಥಿಗಳಿದ್ದಾರೆ. ಶೌಚಾಲಯ ಅಥವಾ ನೀರಿನ ಕೊರತೆಯಿಂದ ಒಂದೂ ಶಾಲೆಯನ್ನು ಮುಚ್ಚಿಲ್ಲ," ಎಂದು ಸ್ಪಷ್ಟಪಡಿಸಿದರು.

ಕೆಪಿಎಸ್ ಶಾಲೆಗಳ ಉನ್ನತೀಕರಣ: 4 ಕೋಟಿ ರೂ. ವೆಚ್ಚ

ಪ್ರತಿ ಗ್ರಾಮ ಪಂಚಾಯತ್‌ಗೆ ಒಂದು ಕರ್ನಾಟಕ ಪಬ್ಲಿಕ್ ಶಾಲೆ ಆರಂಭಿಸುವ ಗುರಿ ಹೊಂದಲಾಗಿದೆ. ಬಿಜೆಪಿ ಸದಸ್ಯ ಹನುಮಂತ್ ರುದ್ರಪ್ಪ ನಿರಾಣಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, "ಒಂದು ಶಾಲೆಯನ್ನು ಕೆಪಿಎಸ್ ಆಗಿ ಉನ್ನತೀಕರಿಸಲು ಸರಾಸರಿ 4 ಕೋಟಿ ರೂ. ವೆಚ್ಚವಾಗುತ್ತಿದೆ. ಈ ಶಾಲೆಗಳಿಗೆ ಮಕ್ಕಳನ್ನು **ಕರೆತರಲು ಬಸ್ ಸೌಲಭ್ಯವನ್ನೂ ಕಲ್ಪಿಸಲಾಗುವುದು,"** ಎಂದರು.

ವಿಲೀನದ ಭೀತಿ ಬೇಡ: ಸಚಿವರ ಭರವಸೆ

ಕೆಪಿಎಸ್ ಶಾಲೆಗಳ ಆರಂಭದಿಂದ ಸಾಮಾನ್ಯ ಸರ್ಕಾರಿ ಶಾಲೆಗಳು ಮುಚ್ಚುತ್ತವೆ ಎಂಬ ಆತಂಕ ಪೋಷಕರಲ್ಲಿ ಬೇಡ. "ಒಂದು ಮಗುವಿದ್ದರೂ ನಾವು ಶಾಲೆಯನ್ನು ನಡೆಸುತ್ತೇವೆ. ಯಾವುದೇ ಕಾರಣಕ್ಕೂ ಶಾಲೆಗಳನ್ನು ವಿಲೀನಗೊಳಿಸುವುದಿಲ್ಲ ಅಥವಾ ಮುಚ್ಚುವುದಿಲ್ಲ. ಪೋಷಕರು ಧೈರ್ಯವಾಗಿ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳುಹಿಸಬೇಕು," ಎಂದು ಸಚಿವರು **ಮನವಿ ಮಾಡಿದರು.**

ಮಹಿಳಾ ಶಕ್ತಿ ಸಂಗಮ: ಜಸ್ಟ್ ಬಿಎಲ್‌ಆರ್‌ನಲ್ಲಿ ಸಂವಾದ

● ಪ್ರಜಾವಾಹಿನಿ–ಬೆಂಗಳೂರು

ನಗರದ ಜಸ್ಟ್ ಬಿಎಲ್‌ಆರ್ ಪಬ್‌ನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಎಂಟು ಮಂದಿ ಅಸಾಧಾರಣ ಮಹಿಳೆಯರ ಉಪಸ್ಥಿತಿಯಲ್ಲಿ ಅತ್ಯಂತ ಸ್ಫೂರ್ತಿದಾಯಕ ಮತ್ತು ಶಕ್ತಿಶಾಲಿ 'ರೌಂಡ್ ಟೇಬಲ್ ಪಾಡ್‌ಕಾಸ್ಟ್' ಇತ್ತೀಚೆಗೆ ಯಶಸ್ವಿಯಾಗಿ ಜರುಗಿತು.

ಪಬ್‌ನ ಮಾಲೀಕರಾದ ರುಚಿ ವರ್ಮಾ ನಾರಾಯಣ್ ಅವರು ಆರ್‌ಜೆ ಸ್ನಿಗ್ಧಾ ಅವರ ಸಹಯೋಗದೊಂದಿಗೆ ಈ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಕೇವಲ ವೃತ್ತಿಯ ಶೀರ್ಷಿಕೆಗಳಿಗಷ್ಟೇ ಸೀಮಿತವಾಗದೆ, ಮಹಿಳೆಯರ ಶಕ್ತಿ, **ಅವರ ಜೀವನದ ಸವಾಲುಗಳು ಮತ್ತು ಯಶಸ್ಸಿನ ಹಾದಿಯ ಬಗ್ಗೆ** ಪ್ರಾಮಾಣಿಕ ಸಂವಾದ ನಡೆಸುವ ಉದ್ದೇಶದಿಂದ ಈ ಕೂಟವನ್ನು ಆಯೋಜಿಸಲಾಗಿತ್ತು.

ಈ ಸಂವಾದದಲ್ಲಿ ವಿವಿಧ ಕ್ಷೇತ್ರಗಳ ನಾಯಕಿಯರು **ಪಾಲ್ಗೊಂಡು ತಮ್ಮ ಅನುಭವಗಳನ್ನು ಹಂಚಿಕೊಂಡರು.**

ಸಿರಿ ಗೌರಿ: ಐಪಿಎಸ್ ಅಧಿಕಾರಿ, ಡಿಐಜಿಪಿ, ಕರ್ನಾಟಕ ವಿದ್ಯುತ್ ನಿಗಮ, ಗೌರಿ ಕಪೂರ್: ಸೌಂದರ್ಯ ತಜ್ಞೆ ಹಾಗೂ ಪ್ರಸಿದ್ಧ ಸೆಲೆಬ್ರಿಟಿ ಮೇಕಪ್ ಆರ್ಟಿಸ್ಟ್, ಶಾಂತಿ ತುಮ್ಮಲ: ಪರಿಸರವಾದಿ ಮತ್ತು ಸುಸ್ಥಿರತೆಯ ಹೋರಾಟಗಾರ್ತಿ, ವಂದನಾ ಸೂರಿ: 'ಟ್ಯಾಕ್ಸಿ' ಸಂಸ್ಥೆಯ ಸ್ಥಾಪಕಿ, ಮಹಿಳಾ ಚಾಲಕಿಯರ ಸಬಲೀಕರಣದ ಧ್ವನಿ, ಮೀತಿ ಮಿಶ್ರಾ: ಡಿಜಿಟಲ್ ಕಂಟೆಂಟ್ ಕ್ರಿಯೇಟರ್, ಮೇಘನಾ ವಾಕಡೆ: ಹೊಟೇಲ್ ಉದ್ಯಮಿ, ಬಾರ್ಲಿ ಮತ್ತು ಗ್ರೇಪ್ಸ್ ಕೆಫೆ ಮುಖ್ಯಸ್ಥೆ, ವನಿತಾ ಅಶೋಕ್: ಫಿಟ್‌ನೆಸ್ ಅಂಬಾಸಿಡರ್ ಹಾಗೂ ಯೋಗಕ್ಷೇಮದ ಪ್ರತಿಪಾದಕಿ, ನಿಧಿ: **ಮಾರ್ಕೆಟಿಂಗ್ ಮತ್ತು ಸ್ಟ್ರಾಟಜಿ ಲೀಡರ್.**

ಸಂವಾದದ ಸಾರಾಂಶ

ನಾಯಕತ್ವ, ಸಹಿಷ್ಣುತೆ, ಉದ್ಯಮಶೀಲತೆ ಮತ್ತು ಬದುಕಿನ ಉದ್ದೇಶಗಳ ಬಗ್ಗೆ ಈ ವೇದಿಕೆಯಲ್ಲಿ ಸುದೀರ್ಘ ಚರ್ಚೆಗಳು ನಡೆದವು. ಮಹಿಳೆಯರು ಎದುರಿಸುವ ಸಾಮಾಜಿಕ ಸವಾಲುಗಳು ಮತ್ತು ಅವುಗಳನ್ನು ಮೀರಿ ನಿಲ್ಲುವ ಬಗ್ಗೆ ಚರ್ಚಿಸಲಾಯಿತು. **"ಕೇವಲ ಮಾತುಗಳಲ್ಲ, ಈ ಸಂಭಾಷಣೆಗಳು ಸಮಾಜದ ಮೇಲೆ ಸಕಾರಾತ್ಮಕ ಪ್ರಭಾವ ಬೀರಬೇಕು ಎನ್ನುವುದೇ ಈ** ಪಾಡ್‌ಕಾಸ್ಟ್‌ನ ಮುಖ್ಯ ಉದ್ದೇಶ," ಎಂದು ಆಯೋಜಕಿ ರುಚಿ ವರ್ಮಾ ನಾರಾಯಣ್ ತಿಳಿಸಿದರು.

ICICI Home Finance | ಕಾರ್ಪೊರೇಟ್ ಕಚೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಬೆಸ್ಟ್‌ಎಫ್‌ಸಿ ಟವರ್, ಅಂಧೇರಿ – ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ – 400059, ಭಾರತ

ಶಾಖಾ ಕಚೇರಿ: 1ನೇ ಮಹಡಿ, ಕಚೇರಿ ಸಂಖ್ಯೆ. 361/2–361/2–1232, ಜಯಚಂದ್ರ ಕಟ್ಟಡ, 4ಎ ಗೌಡ ಸರ್ಕಲ್, 4ನೇ ಕ್ರಾಸ್ ಸ್ಟ್ರೀಟ್, ಎಕ್ಸ್‌ಟೆನ್ಷನ್, ದುರ್ಗಿಗುಡಿ, ಶಿವಮೊಗ್ಗ – 577201

ಶಾಖಾ ಕಚೇರಿ: 2ನೇ ಮಹಡಿ, ಆರ್.ಡಿ ಬಿಲ್ಡಿಂಗ್ ಮ್ಯಾನ್ಷನ್, ಕೋಟಿ ಬ್ಯಾಂಕ್ ಮೇಲೆ, ದಾವಣಗೆರೆ ಸಿಟಿ ಸರ್ವೆ ನಂಬರ್ 123, ಡಿ ಬ್ಲಾಕ್ ರಸ್ತೆ, ಹುಬ್ಬಳ್ಳಿ– 580029.

[ನಿಯಮ 8(6)ರ ನಿಬಂಧನೆಯನ್ನು ನೋಡಿ] ಸ್ಥಿರಾಸ್ತಿ(ಗಳ) ಮಾರಾಟಕ್ಕಾಗಿ ಪ್ರಕಟಣೆ

ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ನಿಯಮ 8(6)ನ್ನು ಓದಿದಂತೆ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಕಾಯಿದೆ 2002ರ ಜಾರಿ ಅನ್ವಯ ಸ್ಥಿರಾಸ್ತಿ(ಗಳ) ಮಾರಾಟಕ್ಕಾಗಿ ಇ-ಹರಾಜು ಮಾರಾಟ ಪ್ರಕಟಣೆ.

ಈ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಹಾಗೂ ನಿರ್ದಿಷ್ಟವಾಗಿ ಸಾಲಗಾರರು ಮತ್ತು ಜಾಮೀನುದಾರರಿಗೆ ಈ ನೋಟಿಸ್ ನೀಡಲಾಗುವುದು, ಕೆಳಗೆ ವಿವರಿಸಲಾದ ಸ್ಥಿರಾಸ್ತಿಯನ್ನು ಭದ್ರತಾ ಸಾಲಗಾರರಿಗೆ ಅಡಮಾನವಿಟ್ಟಿದ್ದು/ವಿಧಿಸಲಾಗಿದ್ದು, ಐಸಿಐಸಿಐ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು ಸ್ವಾಧೀನ, ಸ್ವಾಧೀನಕ್ಕೆ ಪಡೆದಿರುತ್ತಾರೆ ಹಾಗೂ ಕೆಳಗೆ ಸಂಕ್ಷಿಪ್ತವಾಗಿ ವಿವರಿಸಲಾದ ಸದರಿ ಆಸ್ತಿಯನ್ನು 'ಎಲ್ಲಿದೆಯೋ', 'ಏನಿದೆಯೋ' ಮತ್ತು 'ಹೇಗಿದೆಯ